"ಸಾಮಾನಿನ ಕೋಣೆಯೊಳಗೆ ಇಟ್ಟರೆ, ಹೊಟ್ಟು ಹಿಂಡಿ ತಿನಸೆಲ್ಲ ಹಾಕಿಡಲು ಅನುಕೂಲವಾಗುವಂತೆ ಇದೆ..."

ಅತ್ತೆಯರ ತಮಾಷೆಯ ಮಾತುಗಳ ಕೇಳಿ ನಾನು ಅವರ ಬಳಿ ಜಗಳಕ್ಕೆ ಹೋದೆ. ಅಜ್ಜಿ ಮಧ್ಯೆ ಬಂದು ಬಿಡಿಸಿದಳು.

ಒಳಭಾಗವೂ ಹೊರಭಾಗವೂ ಒರಟು ತರಕಲು ಇಲ್ಲದೆ ನುಣುಪಾಗಿಸಲು ತೊಟ್ಟಿಯವರು ಎರಡು ದಿನ ತೆಗೆದುಕೊಂಡರು. ಅಂದು ಸಂಜೆ ನಾನು ಶಾಲೆಯಿಂದ ಹಿಂತಿರುಗಿದ ಸಮಯ "ಬನ್ನಿ ಚಿಕ್ಕ ಸ್ವಾಮಿ, ಬನ್ನಿ" ಎಂದು ಮುಗುಳ್ನಗೆಯೊಂದಿಗೆ ಬರಮಾಡಿಕೊಂಡರು. ನನ್ನ ತೋಳಿನಲ್ಲಿದ್ದ ಚೀಲವನ್ನು ತೆಗೆದುಕೊಂಡ ಅತ್ತೆಯರಿಗೆ ನಗು ಉಕ್ಕಿ "ಹೋಗಿ ಚಿಕ್ಕ ಸ್ವಾಮಿ, ಹೋಗಿ" ಎಂದು ಹಿಡಿದು ತಳ್ಳಿದರು. ಸಂಕೋಚದಿಂದಲೂ ಸಂತೋಷದಿಂದಲೂ ನಾನು ತೊಟ್ಟಿಯೊಳಗೆ ಇಳಿದು ಕುಳಿತೆ. ನನ್ನ ಕತ್ತಿನ ಎತ್ತರಕ್ಕೆ ಅಳತೆ ಮಾಡಿ ಕೆತ್ತಿಟ್ಟಂತೆ ಇತ್ತು ತೊಟ್ಟಿ.

ಅತ್ತೆ ಬಿರುಸಾಗಿ ಹೋಗಿ ಆರೇಳು ಬಿಂದಿಗೆ ನೀರನ್ನು ತೆಗೆದುಕೊಂಡು ಬಂದು ತೊಟ್ಟಿಯೊಳಗೆ ಸುರಿದಳು. ಆ ಕ್ಷಣ ಹಡಗಿನಲ್ಲಿ ಹೋಗುವಂತೆ, ಬಾನಲ್ಲಿ ಹಾರುವಂತೆ, ಏನೇನೋ ಕಲ್ಪನೆಗಳು ಮನಸ್ಸಿನಲ್ಲಿ ಮೂಡಿದವು. ಅತ್ತೆ ಮತ್ತೊಂದು ಬಿಂದಿಗೆ ನೀರು ತಂದು ಮತ್ತೆ ನನ್ನ ಮೇಲೆ ಸುರಿದಳು. ಅಜ್ಜಿ, ಅಮ್ಮ, ಅತ್ತೆ, ತೊಟ್ಟಿಯವರು ಎಲ್ಲರೂ ಓ ಎಂದು ಕೂಗಿ ನಕ್ಕರು. ಸಂತೋಷದಲ್ಲಿ "ಅಚ್ಚಂ ಎಂಬದು ಮಡಮ್ಯೆಯಡಾ ಅಂಜಾಮ್ಯೆ ದ್ರಾವಿಡರ್ ಉಡಮ್ಯೆಯಡಾ" ಎಂದು ಕೈಯನ್ನು ಎತ್ತಿ ಹಾಡಲು ತೊಡಗಿದೆ. ಅದನ್ನು ಕೇಳಿ ಎಲ್ಲರೂ ನಕ್ಕರು.

"ಏನು ತುಂಬಾ ಗಲಾಟೆ ಇಲ್ಲಿ? ದೇವಸ್ಥಾನದ ಬಾಗಿಲಿನವರೆಗೆ ಕೇಳ್ತಾ ಇದೆ ನಿಮ್ಮ ನಗುವಿನ ಶಬ್ದ..." ಎನ್ನುತ್ತಾ ದಿಢೀರೆಂದು ಅಪ್ಪ ಬಂದು ನಿಂತರು. ಆ ಸಮಯದಲ್ಲಿ ಅವರನ್ನು ಯಾರೂ ನಿರೀಕ್ಷಿಸಿರಲಿಲ್ಲ. ಅವರ ದನಿಯನ್ನು ಕೇಳಿದ ಕೂಡಲೇ ಚಟ್ ಎಂದು ಎಲ್ಲ ಅಡಗಿತು. ಗಲಿಬಿಲಿಯಿಂದ ಒಬ್ಬರನ್ನೊಬ್ಬರು ನೋಡಿಕೊಂಡೆವು. ಹಿಂದಿನ ಬಾಗಿಲನ್ನು ದಾಟಿ ಕೊಟ್ಟಿಗೆಯ ಸೂರನ್ನು ಹಿಡಿದಂತೆ ನಿಂತಿದ್ದರು. ಸಾಮಾನ್ಯವಾಗಿ ಅವರ ಬರುವನ್ನು ಅವರ ಚಪ್ಪಲಿಯ ಶಬ್ದವನ್ನು ಕೇಳಿಯೇ ಕಂಡುಹಿಡಿದುಬಿಡುವ ಅಮ್ಮ ಸಹಜವಾಗಿ ಎಲ್ಲರಿಗೂ ಎಚ್ಚರಿಕೆ ನೀಡುವಳು. ಆ ಕೆಲಸದಲ್ಲಿ ಅವರಿಗೆ ಬಹಳ ವರ್ಷದ ಪರಿಶ್ರಮವಿತ್ತು. ಹೇಗೆ ಆ ಶಬ್ದ ನನ್ನ ಗಮನದಿಂದ ತಪ್ಪಿ ಹೋಯಿತು ಎಂದು ಚಿಂತಿಸುತ್ತ ತವಕಿಸುವುದನ್ನು ಅವರ ಮುಖ ತೋರಿಸಿತು. ಮೆಲ್ಲಗೆ ಅಲ್ಲಿಂದ ಸರಿದು, ಬೇಲಿಯ ಪಕ್ಕ ಹರಿದಿದ್ದ ಕನಕಾಂಬರ ಗಿಡಗಳಿಂದ ಹೂ ಕಿತ್ತು ಮಡಿಲಿಗೆ ಹಾಕಿಕೊಳ್ಳಲು ತೊಡಗಿದರು. ಅಲ್ಲಿದ್ದ ಬಿಂದಿಗೆಗಳನ್ನು ಒಂದೊಂದಾಗಿ ತೆಗೆದುಕೊಂಡು ಮೂರು ಅತ್ತೆಯರು ಕೊಟ್ಟಿಗೆಯೊಳಗೆ ಹೋದರು. ಪಕ್ಕದಲ್ಲಿದ್ದ ತೆಂಗಿನ ಮರದ ಸುತ್ತ ನೀರಿನ ಹರಿವಿಗಾಗಿ ಅಗೆದಿದ್ದ ವೃತ್ತಾಕಾರದ ಹಳ್ಳದಲ್ಲಿ ತುಂಬಿಕೊಂಡಿದ್ದ ಕಳೆ ಮಡ್ಡಿಯನ್ನು ಕುಂಟೆಯಿಂದ ಎಳೆದು ಪಕ್ಕಕ್ಕೆ ಸರಿಸಿ ಶುದ್ಧಮಾಡಲು ತೊಡಗಿದಳು ಅಜ್ಜಿ. ಧಾನ್ಯರಾಶಿಗಳಂತೆ ಚದುರಿ ಬಿದ್ದಿದ್ದ ಕಲ್ಲಿನ ತುಣುಕುಗಳನ್ನು ಒಂದು ಕುಕ್ಕೆಯಲ್ಲಿ ಬಾಚಿ ಹೊತ್ತುಹೋಗಿ ಒಂದು ಮೂಲೆಯಲ್ಲಿ ಗುಪ್ಪೆ ಹಾಕುವ ಕೆಲಸದಲ್ಲಿ ತೊಡಗಿದರು ತೊಟ್ಟಿಯವರು. ತೊಟ್ಟಿಯಿಂದ ಆತುರದಿಂದ ಎದ್ದರೂ ಎಲ್ಲಿ ಹೋಗಬೇಕೆಂಬುದು ತೋಚದೆ ನೀರು ತೊಟ್ಟಿಕ್ಕುತ್ತಾ ತೊಟ್ಟಿಯ ಪಕ್ಕದಲ್ಲಿಯೇ ನಾನು ನಿಂತಿದ್ದೆ. ಕೆಲವು ಕ್ಷಣಗಳು ಅಲ್ಲಿಯೇ ನಿಂತು ಎಲ್ಲವನ್ನೂ ನೋಡಿದ ನಂತರ ಹೊರಗೆ ಹೋದರು ಅಪ್ಪ.

ಮಾರನೆಯ ದಿನ ಬೆಳಗ್ಗೆ ವ್ಯಾಪಾರದ ಸಮಯದಲ್ಲಿ ನನ್ನ ಮನಸ್ಸು ಪೂರ್ತಿಯಾಗಿ ಸ್ನಾನದ ತೊಟ್ಟಿಯ ಮೇಲೆಯೇ ಇತ್ತು. ನಾಲ್ಕು ಸೇರು ಹಾಲನ್ನು ಎಂಟು ಸೇರು ಹಾಲೆಂದೂ ಎಂಟು ಸೇರು